ದಿನಾಂಕಃ **21.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

***ಪಾಟೀ ಸವಾಲು : 2 ನೇ ಪ್ರತಿವಾದಿ ಗೈರುಹಾಜರಾಗಿದ್ದು ಅಂತಿಮ ಅವಕಾಶ ನೀಡಿದಾಗಲೂ ಅವರ ಪರ ವಕೀಲರು ಪುನಃ ಸಮಯ ಕೇಳಿದ್ದನ್ನು ನಿರಾಕರಿಸಿ ಅವರ ಪರ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಗಿದೆ.***

ಪಾಟೀಸವಾಲುಃ **4** ನೇ ಪ್ರತಿವಾದಿಯ ಪರ ವಕೀಲರಿಂದ

06. ಸಾಕ್ಷಿ ಪ್ರಮಾಣ ಪತ್ರ ತಯಾರಿಸಲು ಯಾರು ಮಾಹಿತಿ ಕೊಟ್ಟರು? ಎಂದರೆ ನಾನು ಮತ್ತು ನನ್ನ ತಾಯಿ ಕೊಟ್ಟಿದ್ದೇವೆ. ನಾನು ಮತ್ತು ನನ್ನ ತಾಯಿ ಹೊಸಪೇಟೆಯಲ್ಲಿರುವ ವಕೀಲರ ಕಚೇರಿಯಲ್ಲಿ ಮಾಹಿತಿ ಕೊಟ್ಟಿದ್ದೇವೆ. ನನ್ನ ತಾಯಿಗೆ ಹಗರಿಬೊಮ್ಮನಹಳ್ಳಿಯಿಂದ ಹೊಸಪೇಟೆಯ ವಕೀಲರ ಕಚೇರಿಗೆ ಹೋಗಿ ಸೂಚನೆ ನೀಡಲು ಸಾಧ್ಯವಾದಾಗ ಆಕೆಯೇ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಅವರಿಗೆ ಕಾಲು ಮುರಿದಿರುವ ಕಾರಣ ಕೋರ್ಟಿಗೆ ಬರಲು ಆಗುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ತಯಾರಿಸಲು ನಾನೊಬ್ಬನೇ ಮಾಹಿತಿ ಕೊಟ್ಟಿದ್ದೆ , ಆಗ ನನ್ನ ತಾಯಿಗೆ ಬರಲಿಕ್ಕೆ ಸಾಧ್ಯವಾಗಿರಲಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿ ಗುರುತಿಸಿಕೊಂಡ ದಾಖಲೆಗಳನ್ನು ನಾನು ಮತ್ತು ನನ್ನ ತಮ್ಮ ಪಡೆದುಕೊಂಡಿದ್ದೆವು. ದಾವಾ ಸ್ವತ್ತುಗಳ ಬಗ್ಗೆ ಮತ್ತು ನಮ್ಮ ಮನೆತನದ ವಿಷಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ನನ್ನ ಅಜ್ಜ ತೊಂಡಿಹಾಳ್ ತೋಟನಗೌಡ ಮತ್ತು ನನ್ನ ಅಜ್ಜಿ ತೊಂಡಿಹಾಳು ಶಿವಬಸಮ್ಮನಿಗೆ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಮಕ್ಕಳೆಂದರೆ ಸರಿ. ನನ್ನ ಅಜ್ಜ ಮತ್ತು ಅಜ್ಜಿಗೆ ಯಾವುದೇ ಗಂಡು ಸಂತಾನ ಇರಲಿಲ್ಲ ಎಂದರೆ ಸರಿ.

07. ದಾವಾದಲ್ಲಿ ಎಷ್ಟು ಆಸ್ತಿಗಳಿರುತ್ತವೆ ಮತ್ತು ಅವುಗಳ ಸರ್ವೇ ನಂಬರುಗಳು ಏನು ಎಂದು ಗೊತ್ತಿದೆಯೇ? ಎಂದರೆ ಗೊತ್ತಿದೆ. ಹರಪನಹಳ್ಳಿ ರಸ್ತೆಯಲ್ಲಿರುವ ಸ. ನಂ. 235 ಎ/3 ನಲ್ಲಿ 1 ಎಕರೆ 82 ಸೆಂಟ್ಸ್, ದಾಸರಹಳ್ಳಿ ರಸ್ತೆಯಲ್ಲಿರುವ ಸ. ನಂ. 329 ಇ/1 ರಲ್ಲಿ 3 ಎಕರೆ 26 ಸೆಂಟ್ಸ್, ಸ.ನಂ.329 ಸಿ/1 ರಲ್ಲಿ 1 ಎಕರೆ 70 ಸೆಂಟ್ಸ್ ಮತ್ತು ಮನೆ ನಂ. 369/1 ಮತ್ತು 369/2 ನಾವು ದಾವೆ ಸಲ್ಲಿಸಿದ ಆಸ್ತಿಗಳು ಹಾಗೂ ದಾವೆ ನಡೆಯುವಾಗ ಸೇರ್ಪಡೆ ಮಾಡಿದ ಬಿದರಳ್ಳಿ ಸ. ನಂ. 175 ರ ಪೈಕಿ 3 ಎಕರೆ 38 ಸೆಂಟ್ಸ್ ಇರುತ್ತವೆ. ನನ್ನ ಅಜ್ಜ-ಅಜ್ಜಿ ತೀರಿಕೊಂಡ ನಂತರ ಈ ಆಸ್ತಿಗಳಿಗೆ ನನ್ನ ತಾಯಿ ಮತ್ತು ನನ್ನ ತಾಯಿಯ ಒಡಹುಟ್ಟಿದ ಸಹೋದರಿಯರು ವಾರಸುದಾರರಾಗುತ್ತಾರೆ ಎಂದರೆ ಸರಿ. ವಾದ ಪತ್ರಕ್ಕೆ ತಿದ್ದುಪಡಿ ತರುವ ಮುಂಚೆ ಐಟಂ ನಂ. 3 ರ ಆಸ್ತಿಯ ವಿವರಣೆಯನ್ನು ಏನೆಂದು

ಬರೆಯಲಾಗಿತ್ತು? ಎಂದರೆ ಆಗಲೂ ಸರ್ವೇ ನಂ. 235 ಎ/3 ರಲ್ಲಿ 1 ಎಕರೆ 82 ಸೆಂಟ್ಸ್ ಎಂದೇ ಬರೆದಿದ್ದೆವು. ತಿದ್ದುಪಡಿ ಆಗುವ ಮುಂಚೆ ಐಟಂ ನಂ. 3 ನ್ನು ಸ. ನಂ. 253 ಎ/3 ಎಂದು ನಮೂದು ಮಾಡಿದ್ದೆವು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿದ್ದುಪಡಿ ಮಾಡುವ ಮುಂಚೆ ನೀಡಿದ್ದ ಐಟಂ ನಂ. 3 ರ ಸರ್ವೇ ನಂಬರ್ ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಲಾಗಿತ್ತೇ? ಎಂದರೆ ಇಲ್ಲ. ಹಾಗಾದರೆ ತಿದ್ದುಪಡಿ ವಾದ ಪತ್ರದಲ್ಲಿ ಐಟಂ ನಂ. 3 ನ್ನು ಹೇಗೆ ಸರಿಪಡಿಸಿ ಸಲ್ಲಿಸಿದ್ದೀರಿ? ಎಂದರೆ ನಾವು ವಾದ ಪತ್ರ ತಿದ್ದುಪಡಿ ಮಾಡಿಲ್ಲ. ಕೋರ್ಟಿನ ಆದೇಶ ಪಡೆಯದೇ ಮೊದಲ ಬಾರಿ ಸಲ್ಲಿಸಿದ್ದ ವಾದ ಪತ್ರದಲ್ಲಿ ತೋರಿಸಿದ ಐಟಂ ನಂ. 3 ರ ವಿವರಣೆಯನ್ನು ತಿದ್ದುಪಡಿ ವಾದ ಪತ್ರದಲ್ಲಿ ಸೇರಿಸಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ .

08. ಐಟಂ ನಂ. 3 ರ ಆಸ್ತಿ ತೊಂಡಿಹಾಳು ಬಸಮ್ಮನಿಗೆ ಹೇಗೆ ಬಂದಿತ್ತೆಂದು ವಾದ ಪತ್ರದಲ್ಲಿ ಬರೆಯಿಸಿದ್ದೀರಾ? ಎಂದರೆ ನನಗೆ ನೆನಪಿಲ್ಲ. ಸದರಿ ಆಸ್ತಿಯು ನನ್ನ ಅಜ್ಜಿಗೆ ಪಾಲುವಿಭಾಗದ ಮೂಲಕ ಬಂದಿತ್ತು ಎಂದರೆ ಸರಿ. ನಿಪಿ6 ರಿಂದ ನಿಪಿ18 ದಾಖಲೆಗಳಲ್ಲಿ ಪಾಲುವಿಭಾಗದ ಪ್ರಕಾರ ಐಟಂ ನಂ. 3 ನನ್ನ ಅಜ್ಜಿಗೆ ಬಂದಿತ್ತೆಂದು ನಮೂದಾಗಿದೆ ಎಂದರೆ ಸರಿ. ನನ್ನ ಅಜ್ಜಿಗೆ ಐಟಂ ನಂ. 3 ನ್ನು ಆಕೆಯ ಜೀವನ ನಿರ್ವಹಣೆ ಮತ್ತು ಜೀವನಾಂಶಕ್ಕಾಗಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜಿ ಶಿವಬಸಮ್ಮನನ್ನು 1 ನೇ ಪ್ರತಿವಾದಿ ಶಾಂತಮ್ಮ ಆರೈಕೆ ಮಾಡಿ ಚೆನ್ನಾಗಿ ನೋಡಿಕೊಂಡಿದ್ದ ಕಾರಣದಿಂದ ನನ್ನ ಅಜ್ಜಿಯು ಐಟಂ ನಂ. 3 ನ್ನು 1 ನೇ ಪ್ರತಿವಾದಿಗೆ ವಿಲ್ ಪತ್ರದ ಮೂಲಕ ನೀಡಿದ್ದಾರೆ ಎಂದರೆ ವಿಲ್ ಬಗ್ಗೆ ನಮಗೆ ಮಾಹಿತಿ ಇರಲಿಲ್ಲ 2011 ರಲ್ಲಿ ವಿಲ್ ಮಾಡಿದ್ದರು, ಅದರ ಪ್ರಕಾರ ನನ್ನ ಅಜ್ಜಿ ಮೃತಪಟ್ಟ ನಂತರ ಐಟಂ ನಂ. 3 ರ ಖಾತೆ ಬದಲಾವಣೆ 1 ನೇ ಪ್ರತಿವಾದಿಯ ಹೆಸರಿಗೆ ಆಯಿತು ಎಂದರೆ ನಮಗೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆದ ನಂತರವೇ ವಿಲ್ ಬಗ್ಗೆ ಗೊತ್ತಾಯಿತು. ಖಾತೆ ಬದಲಾವಣೆಯನ್ನು ನಾನು ಮತ್ತು ನನ್ನ ತಾಯಿ ಎ.ಸಿ.ಯವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ. ವಿಲ್ ಪ್ರಕಾರ ಐಟಂ ನಂ. 3 ರ ಆಸ್ತಿ ನನ್ನ ಅಜ್ಜಿಯಿಂದ 1 ನೇ ಪ್ರತಿವಾದಿ ಹೆಸರಿಗೆ ಕಾನೂನುಬದ್ಧವಾಗಿ ವರ್ಗಾವಣೆ ಆಗಿರುವುದು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

09. ನನ್ನ ತಾಯಿ, ನನ್ನ ಚಿಕ್ಕಮ್ಮ ಮತ್ತು ನನ್ನ ದೊಡ್ಡಮ್ಮನ ಸಹಿಗಳನ್ನು ನೋಡಿದರೆ ಗುರುತಿಸಲು ಆಗುತ್ತದೆಯೇ? ಎಂದರೆ ಆಗುತ್ತದೆ. ಸಾಕ್ಷಿಗೆ ವಾದಿ ಶಕುಂತಲಮ್ಮ ರವರ ವಕಾಲತ್ತನ್ನು ತೋರಿಸಿ ಇದರಲ್ಲಿರುವ ಸಹಿ ಯಾರದು? ಎಂದು ಕೇಳಿದ್ದು, ಸಾಕ್ಷಿಯವರು ನನ್ನ ತಾಯಿಯ ಸಹಿ ಎಂದು ಗುರುತಿಸಿದ್ದಾರೆ. ಸಾಕ್ಷಿಗೆ 20.10.2018 ರ ಕರಾರನ್ನು ತೋರಿಸಿ ಇದರಲ್ಲಿ ನಿಮ್ಮ ತಾಯಿ ವಾದಿಯ ಸಹಿ ಇದೆ ಎಂದು ಸೂಚಿಸಿದ್ದು ಸಾಕ್ಷಿಯವರು ಇಲ್ಲವೆಂದು ನಿರಾಕರಿಸಿದ್ದಾರೆ. ಸದರಿ ಕರಾರಿನಲ್ಲಿ ನನ್ನ ಚಿಕ್ಕಮ್ಮ ಮತ್ತು ದೊಡ್ಡಮ್ಮನ ಸಹಿಗಳು ಕೂಡಾ ಇರುತ್ತವೆ ಎಂದರೆ ಸರಿಯಲ್ಲ. 4 ನೇ

ಪ್ರತಿವಾದಿಯು ಐಟಂ ನಂ. 3 ನ್ನು ಖರೀದಿ ಮಾಡುವ ಮುಂಚೆ ನನ್ನ ತಾಯಿ, ನನ್ನ ಚಿಕ್ಕಮ್ಮ, ನನ್ನ ದೊಡ್ಡಮ್ಮ ಮತ್ತು ನನಗೂ ಕೂಡಾ ಖರೀದಿಯ ಮಾತುಕತೆಯಲ್ಲಿ ಭಾಗವಹಿಸುವಂತೆ ಫೋನ್ ಕರೆ ಮಾಡಿ ತಿಳಿಸಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜಿ 1 ನೇ ಪ್ರತಿವಾದಿಗೆ ವಿಲ್ ಬರೆದ ನಂತರ ದಿನಾಂಕ 01.01.2017 ರಂದು ಮೃತಪಟ್ಟಿದ್ದಾರೆ ಎಂದರೆ ನನ್ನ ಅಜ್ಜಿ ಆ ದಿನಾಂಕದಂದು ಮೃತಪಟ್ಟಿದ್ದಾರೆ, ಆದರೆ ವಿಲ್ ಬಗ್ಗೆ ಗೊತ್ತಿಲ್ಲ. ನನ್ನ ಅಜ್ಜಿ ತೀರಿಕೊಂಡ ನಂತರ ನೋಂದಾಯಿತ ವಿಲ್ ಮೂಲಕ ಐಟಂ ನಂ. 3 ರ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಆಗಿರುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ದೊಡ್ಡಮ್ಮನ ಹೆಸರಿಗೆ ಪಹಣಿ ಆಗಿರುವುದು ನಿಜ ಆದರೆ ವಿಲ್ ಬಗ್ಗೆ ಗೊತ್ತಿಲ್ಲ. ಎ.ಸಿ.ಯವರ ನ್ಯಾಯಾಲಯದಲ್ಲಿ ನನ್ನ ತಾಯಿ ಮತ್ತು 2 ನೇ ಪ್ರತಿವಾದಿ ಇಬ್ಬರೂ ಅರ್ಜಿದಾರರಾಗಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಆ ನಂತರ ದಾವೆ ಹಾಕುವಾಗ 2 ನೇ ಪ್ರತಿವಾದಿಯನ್ನು ವಾದಿಯಾಗಿ ಮಾಡದೇ ಪ್ರತಿವಾದಿಯನ್ನಾಗಿ ಮಾಡಿ ದಾವೆ ಹಾಕಿದ್ದೇವೆ ಎಂದರೆ ಸರಿ.

10. 4 ನೇ ಪ್ರತಿವಾದಿಯು ವಾದಿಯನ್ನೂ ಸೇರಿಸಿ ಉಳಿದ ಎಲ್ಲಾ ಪ್ರತಿವಾದಿಗಳಿಗೆ ಫೋನ್ ಕರೆ ಮಾಡಿ ಐಟಂ ನಂ. 3 ನ್ನು ಖಂಡಿತ ಕ್ರಯಕ್ಕೆ ದಿನಾಂಕ 20.10.2018 ರಂದು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರಕ್ಕೆ ನನ್ನ ತಾಯಿ ಮತ್ತು ಉಳಿದ ಪ್ರತಿವಾದಿಗಳು ಒಪ್ಪಿಗೆ ಸಾಕ್ಷಿಗಳಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದಾದ ನಂತರ ದಿನಾಂಕ 02.05.2019 ರಂದು 4 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ಐಟಂ ನಂ. 3 ನ್ನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದರು ಎಂದರೆ ನನಗೆ ಮಾಹಿತಿ ಇಲ್ಲ . ಖರೀದಿ ಮಾಡಿದ ದಿನಾಂಕದಂದೇ 4 ನೇ ಪ್ರತಿವಾದಿಯು ಐಟಂ ನಂ. 3 ರ ಸ್ವಾಧೀನವನ್ನು 1 ನೇ ಪ್ರತಿವಾದಿಯಿಂದ ಪಡೆದುಕೊಂಡು ಇವತ್ತಿನವರೆಗೂ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ತನ್ನ ಕ್ರಯ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಕೊಟ್ಟಾಗಲೇ ನಾವು ಎ.ಸಿ.ಯವರ ಕೋರ್ಟಿಗೆ ಹೋಗಿದ್ದೆವು ಎಂದರೆ ನನಗೆ ಯಾವ ಪಿರಿಯಡ್ ನಲ್ಲಿ ಎ.ಸಿ. ಕೋರ್ಟಿಗೆ ಹೋಗಿದ್ದೆವೆಂದು ನೆನಪಿಲ್ಲ. ಎ.ಸಿ.ಯವರ ನ್ಯಾಯಾಲಯದಲ್ಲಿ 4 ನೇ ಪ್ರತಿವಾದಿಯನ್ನು ಪಕ್ಷಕಾರರಾಗಿ ಮಾಡಿಲ್ಲ ಎಂದರೆ ಅವರು ಯಾರು ಎಂದು ನಮಗೆ ಗೊತ್ತಿರಲಿಲ್ಲ. ನಮಗೆ ಖರೀದಿ ವ್ಯವಹಾರ ಮತ್ತು ಹಕ್ಕು ಬದಲಾವಣೆ ಬಗ್ಗೆ ಮಾಹಿತಿ ಇದ್ದರೂ 4 ನೇ ಪ್ರತಿವಾದಿಯ ಹಿಂದುಗಡೆ ಎ.ಸಿ.ಯವರ ನ್ಯಾಯಾಲಯದಲ್ಲಿ ಆದೇಶ ಪಡೆದಿದ್ದೇವೆ ಎಂದರೆ ಸರಿಯಲ್ಲ. ಐಟಂ ನಂ. 3 ನನ್ನ ತಾಯಿ ಮತ್ತು ಆಕೆಯ ಸಹೋದರಿಯರಿಗೆ ಎ.ಸಿ.ಯವರ ಆದೇಶದಂತೆ ಬಂದಿದೆ ಎಂದು ವಾದ ಪತ್ರದಲ್ಲಿ ಬರೆಯಿಸಿದ್ದುಂಟೇ ? ಎಂದರೆ ಬರೆಯಿಸಿಲ್ಲ. ಎ.ಸಿ.ಯವರ ಆದೇಶದ ವಿರುದ್ಧ 4 ನೇ ಪ್ರತಿವಾದಿ ಡಿ.ಸಿ.ಯವರ ನ್ಯಾಯಾಯದಲ್ಲಿ ಅಪೀಲು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡಿ.ಸಿ.ಯವರ ನ್ಯಾಯಾಲಯದಲ್ಲಿ ನನ್ನ ತಾಯಿ ಯಾವುದೇ

ವಕೀಲರನ್ನೂ ನೇಮಕ ಮಾಡಿಕೊಂಡಿಲ್ಲ ಮತ್ತು ನಮಗೆ ನೋಟೀಸ್ ಕೂಡಾ ಬಂದಿಲ್ಲ. ಡಿ.ಸಿ.ಯವರು ಎ.ಸಿ.ಯವರ ಆದೇಶ ರದ್ದು ಮಾಡಿ ಕ್ರಯ ಪತ್ರದ ಪ್ರಕಾರ 4 ನೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಲು ಆದೇಶ ಮಾಡಿದ್ದಾರೆ ಎಂದರೆ ನಂತರ ಗೊತ್ತಾಯಿತು. ಡಿ.ಸಿ.ಯವರ ಆದೇಶವನ್ನು ಪ್ರಶ್ನಿಸಿ ಅಪೀಲು ಸಲ್ಲಿಸಿದ್ದೀರಾ? ಎಂದರೆ ಇಲ್ಲ, ಆದ್ದರಿಂದಲೇ ದಾವೆ ಹಾಕಿದ್ದೇವೆ. 4 ನೇ ಪ್ರತಿವಾದಿಯು ನನ್ನ ಅಜ್ಜಿ ಮತ್ತು 1 ನೇ ಪ್ರತಿವಾದಿಯ ಹೆಸರುಗಳಿಗೆ ಐಟಂ ನಂ. 3 ಹೇಗೆ ಬಂದಿತ್ತು ಎಂಬ ಬಗ್ಗೆ ಎಲ್ಲಾ ದಾಖಲೆಗಳನ್ನೂ ಪರಿಶೀಲನೆ ಮಾಡಿ ಸದ್ಭಾವನೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ನಷ್ಟ ಉಂಟುಮಾಡುವ ಉದ್ದೇಶದಿಂದ ನನ್ನ ತಾಯಿ ಮತ್ತು ಉಳಿದ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನೋಂದಾಯಿತ ಕ್ರಯ ಪತ್ರದ ಆಧಾರದ ಮೇಲೆ4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿ ಪಹಣಿ ಕೂಡಾ ನಮೂದಾಗಿದೆ ಎಂದರೆ ಸರಿ. 4 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಜಮೀನಿನ ಅಭಿವೃದ್ಧಿ ಮಾಡಲು ಸಾಕಷ್ಟು ಹಣ ಖರ್ಚು ಮಾಡಿದ್ದಾರೆ ಎಂದರೆ ಇಲ್ಲ, ಜಮೀನು ನಮ್ಮ ಸ್ವಾಧೀನದಲ್ಲೇ ಇದ್ದು, ನಾವು ಹಾಗೇ ಬಿಟ್ಟಿದ್ದೇವೆ. ನಮ್ಮ ಸ್ವಾಧೀನದಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ. 3 ರ ಮೇಲೆ ನನ್ನ ತಾಯಿ ಹಾಗೂ 2 ಮತ್ತು 3 ನೇ ಪ್ರತಿವಾದಿಗಳಿಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂ.3 ರ ಬಗ್ಗೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.